# ಕುವೆಂಪು ವಿಶ್ವವಿದ್ಯಾಲಯ
## ವಿಶ್ವವಿದ್ಯಾಲಯ ಕಾರ್ಯಾಲಯ

ಜ್ಞಾನ ಸಹ್ಯಾದ್ರಿ,
ಶಂಕರಘಟ್ಟ–577 451

---

ಸಂಖ್ಯೆ:ಕುವಿ: :2022–23. ದಿನಾಂಕ:12–07–2022.

### ಸುತ್ತೋಲೆ

ವಿಷಯ: ರಾಷ್ಟ್ರದ "75ನೇ ಸ್ವಾತಂತ್ರ್ಯದ ವರ್ಷದ ಸ್ವಾತಂತ್ರ್ಯೋತ್ಸವದ ಸಂಭ್ರಮಾಚರಣೆಯ ಅಂಗವಾಗಿ ಅಯೋಜಿಸುವ ವೈವಿಧ್ಯಮಯ ಚಟುವಟಿಕೆಗಳ ಕುರಿತು.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ:ಇಡಿ:99:ಯುಎನ್ಇ:2021:ದಿ:09–07–2022.

----

ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳು/ಪದವಿ ಕಾಲೇಜುಗಳಲ್ಲಿ **"75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ"**ದ ಅಂಗವಾಗಿ ವೈವಿಧ್ಯಮಯವಾಗಿ ಮತ್ತು ವಿವಿಧ ಚಟುವಟಿಕೆಗಳನ್ನು ಆಯೋಜಿಸುವ ಮೂಲಕ ಸ್ವಾತಂತ್ರ್ಯ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಕರ್ನಾಟಕ ಸರಕಾರವು ಸುತ್ತೊಲೆಯನ್ನು ಹೊರಡಿಸಿದೆ.

ಈ ಹಿನ್ನಲೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳು/ಪದವಿ ಕಾಲೇಜುಗಳಲ್ಲಿ ರಾಷ್ಟ್ರದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಸಂಭ್ರಮಾಚರಣೆಯ ಅಂಗವಾಗಿ ಕಾರ್ಯಕ್ರಮಗಳನ್ನು ಆಯೋಜಿಸಬೇಕಾಗಿದ್ದು ವಿಶ್ವವಿದ್ಯಾಲಯದ ಹಂತದಲ್ಲಿ ಸಾಂಸ್ಕೃತಿಕ ಯೋಜನಾಧಿಕಾರಿಯು ಮತ್ತು ಕಾಲೇಜು ಹಂತದಲ್ಲಿ ಪ್ರಾಂಶುಪಾಲರುಗಳು ಈ ಕೆಳಕಂಡ ಸ್ಪರ್ಧೆಗಳು ಮತ್ತು ಚಟುವಟಿಕೆಗಳನ್ನು ಆಯೋಜಿಸಲು ಸೂಚಿಸಿದೆ.

**ಕಾರ್ಯಕ್ರಮಗಳ ಪಟ್ಟಿ**

1. ಪ್ರಬಂಧ ಸ್ಪರ್ಧೆ,
2. ಚರ್ಚಾಸ್ಪರ್ಧೆ,
3. ಪೇಂಟಿಂಗ್ ಸ್ಪರ್ಧೆ,
4. ದೇಶಭಕ್ತಿ ಗೀತೆಗಳ ಸ್ಪರ್ಧೆ,
5. ಕಿರು ನಾಟಕಗಳ ಸ್ಪರ್ಧೆ,
6. ಪೋಸ್ಟರ್ ತಯಾರಿಕೆ ಸ್ಪರ್ಧೆ,
7. ಸ್ವಾತಂತ್ರ್ಯ ಓಟ ಸ್ಪರ್ಧೆ

ಹೆಚ್ಚಿನ ಮಾಹಿತಿಗಾಗಿ ಈ ಪತ್ರದೊಂದಿಗೆ ಲಗತ್ತಿಸಿರುವ ಕರ್ನಾಟಕ ಸರಕಾರದ ಸುತ್ತೋಲೆಯನ್ನು ಗಮನಿಸುವುದು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾಲಯ,
ಜ್ಞಾನಸಹ್ಯಾದ್ರಿ. ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ, ಕರ್ನಾಟಕ.

ಗೆ.
ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕ / ಸ್ನಾತಕೋತ್ತರ / ಘಟಕ / ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು/ ವಿಭಾಗಾಧ್ಯಕ್ಷರುಗಳಿಗೆ ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ/ ಕಡೂರು/ ಚಿಕ್ಕಮಗಳೂರು/ ಶಿವಮೊಗ್ಗ.

1

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 99 ಯುಎನ್ಇ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:09-07-2022.

**ಸುತ್ತೋಲೆ**

ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳು /ಪದವಿ ಕಾಲೇಜುಗಳಲ್ಲಿ **'75 ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವ' ದ** ಅಂಗವಾಗಿ ವೈವಿಧ್ಯಮಯವಾಗಿ ಮತ್ತು ವಿವಿಧ ಚಟುವಟಿಕೆಗಳನ್ನು ಆಯೋಜಿಸುವ ಮೂಲಕ ಸ್ವಾತಂತ್ರ್ಯ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಉದ್ದೇಶಿಸಲಾಗಿದೆ.

ಭಾರತ ಸರ್ಕಾರ ನಮ್ಮ ದೇಶದ ಉಜ್ವಲ ಇತಿಹಾಸ, ವೈಭವಯುತ ಸಾಂಸ್ಕೃತಿಕ ಪರಂಪರೆ, ಶೌರ್ಯಪರಾಕ್ರಮ ಹಾಗೂ ಅದ್ಭುತ ಸಾಧನೆಗಳನ್ನು ಸಾಮೂಹಿಕ ಸ್ಮರಣೆಯಲ್ಲಿ ಹಸಿರಾಗಿರಿಸಲು ಹಾಗೂ ರಾಷ್ಟ್ರದ ಘನತೆಯನ್ನು ವರ್ಧಿಸುವ ಚಟುವಟಿಕೆಗಳಲ್ಲಿ ನಾಡಿನ ಜನತೆಯನ್ನು ಪ್ರೇರೇಪಿಸಲು **'ಸ್ವಾತಂತ್ರ್ಯದ ಅಮೃತ ಮಹೋತ್ಸವ'** ದ ಉಪಕ್ರಮವನ್ನು 12 ನೇ ಮಾರ್ಚ್ 2021 ರಿಂದ 15ನೇ ಆಗಸ್ಟ್ 2023 ರವರೆಗೆ ಆಯೋಜಿಸಿದೆ.

15 ನೇ ಆಗಸ್ಟ್ 2022 ರಂದು ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷಗಳು ಪೂರ್ಣಗೊಳ್ಳುತ್ತವೆ. ಈ ಶುಭಸಂದರ್ಭದ ಸಂಸ್ಮರಣೆಯಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ರಾಷ್ಟ್ರದ ಮಹೋನ್ನತ ಇತಿಹಾಸದ ನೆನಪುಗಳನ್ನು ಪುನಃ ಜೀವಂತಗೊಳಿಸಿ, ನಮ್ಮ ದೇಶವನ್ನು ಪ್ರಗತಿಪಥದಲ್ಲಿ ಸ್ಥಿರವಾಗಿ ನಿಲ್ಲಿಸುವ ನಿಟ್ಟಿನಲ್ಲಿ ವೈವಿಧ್ಯಮಯ ಚಟುವಟಿಕೆಗಳನ್ನು ಕಾಲೇಜು ಹಂತ, ವಿಶ್ವವಿದ್ಯಾಲಯದ ಹಂತ ಹಾಗೂ ರಾಜ್ಯಮಟ್ಟದಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ.

ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳು /ಪದವಿ ಕಾಲೇಜುಗಳಲ್ಲಿ ರಾಷ್ಟ್ರದ ಸ್ವಾತಂತ್ರ್ಯೋತ್ಸವದ 75 ನೇ ವರ್ಷದ ಸಂಭ್ರಮಾಚರಣೆಯ ಅಂಗವಾಗಿ ಆಯೋಜಿಸಬಹುದಾದ ವೈವಿಧ್ಯಮಯ ಚಟುವಟಿಕೆಗಳ ಸೂಚ್ಯವಾದ ಪಟ್ಟಿಯನ್ನು ನೀಡಲಾಗಿದ್ದು, ವಿಶ್ವವಿದ್ಯಾಲಯದ ಹಂತದಲ್ಲಿ ಸಾಂಸ್ಕೃತಿ ಸಂಯೋಜನಾಧಿಕಾರಿಯು, ಕಾಲೇಜು ಹಂತದಲ್ಲಿ ಪ್ರಾಂಶುಪಾಲರುಗಳು ಈ ಕೆಳಕಂಡ ಸ್ಪರ್ಧೆಗಳು ಮತ್ತು ಚಟುವಟಿಕೆಗಳನ್ನು ನಮೂದಿಸಿರುವ ವೇಳಾಪಟ್ಟಿಯಂತೆ ಆಯೋಜಿಸುವುದು.

**ಭಾರತದ ಸ್ವಾತಂತ್ರ್ಯ ಚಳುವಳಿಯ ಕುರಿತು ಸ್ಪರ್ಧೆಗಳ ಪಟ್ಟಿ:**

1. ಪ್ರಬಂಧ ಸ್ಪರ್ಧೆ
2. ಚರ್ಚಾಸ್ಪರ್ಧೆ
3. ಪೇಂಟಿಂಗ್ ಸ್ಪರ್ಧೆ
4. ದೇಶಭಕ್ತಿಗೀತೆಗಳ ಸ್ಪರ್ಧೆ
5. ಕಿರುನಾಟಕಗಳ ಸ್ಪರ್ಧೆ
6. ಪೋಸ್ಟರ್ ತಯಾರಿಕೆ ಸ್ಪರ್ಧೆ
7. ಸ್ವಾತಂತ್ರ್ಯ ಓಟ ಸ್ಪರ್ಧೆ

**ಚಟುವಟಿಕೆಗಳ ಪಟ್ಟಿ:**

**ತರಗತಿಯ ಸ್ತರದಲ್ಲಿ ಸ್ವಾತಂತ್ರ್ಯ ಚಳುವಳಿಯ ಕುರಿತು ವಿಚಾರಸಂಕಿರಣಗಳು**

1. ನುರಿತ ಭಾಷಣಕಾರರಿಂದ ಸ್ವಾತಂತ್ರ್ಯ ಚಳುವಳಿಯ ಕುರಿತು ಕಾಲೇಜಿನಲ್ಲಿ ವಿಶೇಷ ಉಪನ್ಯಾಸ
2. ಸ್ಥಳೀಯವಾಗಿ ಲಭ್ಯರಿರುವ ಸ್ವಾತಂತ್ರ್ಯ ಹೋರಾಟಗಾರರನ್ನು ಕಾಲೇಜಿಗೆ ಆಹ್ವಾನಿಸಿ ಸನ್ಮಾನಿಸುವುದು
3. ಪ್ರತಿ ವಿದ್ಯಾರ್ಥಿಯು ಕನಿಷ್ಠ 10 ಸ್ವಾತಂತ್ರ್ಯ ಹೋರಾಟಗಾರರ ಕುರಿತು ಫೋಟೋ ಸಹಿತ ಟಿಪ್ಪಣಿ ಸಿದ್ಧಪಡಿಸಲು ಪ್ರೇರೇಪಿಸಿ, ಅತ್ಯುತ್ತಮ ಟಿಪ್ಪಣಿಗಳನ್ನು ಕಾಲೇಜಿನಲ್ಲಿ ಪ್ರದರ್ಶಿಸುವುದು.
4. ಸ್ವಾತಂತ್ರ್ಯ ಚಳುವಳಿಗೆ ಸಂಬಂಧಪಟ್ಟ ಸ್ಥಳಗಳಿಗೆ ವಿದ್ಯಾರ್ಥಿಗಳ ಭೇಟಿಯನ್ನು ಏರ್ಪಡಿಸುವುದು.
5. ಸ್ವಾತಂತ್ರ್ಯ ಸಂಗ್ರಾಮ ಮತ್ತು ದೇಶರಕ್ಷಣೆಯ ಕುರಿತ ಸಾಕ್ಷ್ಯಚಿತ್ರಗಳ ಪ್ರದರ್ಶನ
6. ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಸೈಕಲ್ ಜಾಥಾ
7. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಪ್ರತಿ ವಿದ್ಯಾರ್ಥಿಯಿಂದ ಸಸಿ ನೆಡುವ ಕಾರ್ಯಕ್ರಮ

**ಸೂಚನೆಗಳು:**

1. ಸರ್ಕಾರಿ ವಿಶ್ವವಿದ್ಯಾಲಯಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಸಂಯೋಜಿತ ಪದವಿ ಕಾಲೇಜುಗಳಲ್ಲಿ ಪ್ರತಿ 50 ಸಂಯೋಜಿತ ಕಾಲೇಜುಗಳನ್ನು ಒಂದು ಘಟಕ ಎಂದು ಪರಿಗಣಿಸಿ, ಅವುಗಳಿಗೆ ಘಟಕ ಹಂತದ ಸ್ಪರ್ಧೆಗಳನ್ನು ಆಯೋಜಿಸಿ, ನಂತರ ವಿಶ್ವವಿದ್ಯಾಲಯವು ರಚಿಸಿಕೊಂಡಿರುವ ವಿವಿಧ ಘಟಕಗಳ ಸ್ಪರ್ಧಾವಿಜೇತರ (ಪ್ರತಿ ಘಟಕದಿಂದ 05 ಜನ ವಿಜೇತರು) ನಡುವೆ ಸ್ಪರ್ಧೆಗಳನ್ನು ಏರ್ಪಡಿಸುವುದು.
2. ವಿವಿಧ ವಿಶ್ವವಿದ್ಯಾಲಯಗಳು ಕೆಳಗಿನ ಕೋಷ್ಟಕದಲ್ಲಿ ಸೂಚಿಸಿದ ಒಂದು ಸ್ಪರ್ಧೆಯನ್ನು, ವಿಶ್ವವಿದ್ಯಾಲಯ ಹಂತದಲ್ಲಿ ಆಯಾ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳ ನಡುವೆ ರಾಜ್ಯಮಟ್ಟದ ಸ್ಪರ್ಧೆಗಳನ್ನು ಏರ್ಪಡಿಸುವುದು.

**<u>ಕೋಷ್ಟಕ</u>**

| ಕ್ರ. ಸಂ | ಸ್ಪರ್ಧೆ | ರಾಜ್ಯಮಟ್ಟದ **ಭಾರತದ ಸ್ವಾತಂತ್ರ್ಯ ಚಳುವಳಿಯ ಕುರಿತು** ಸ್ಪರ್ಧೆಗಳನ್ನು ನಡೆಸುವ ವಿಶ್ವವಿದ್ಯಾಲಯ |
|---|---|---|
| 1 | ಪ್ರಬಂಧ ಸ್ಪರ್ಧೆ | ಮೈಸೂರು ವಿಶ್ವವಿದ್ಯಾಲಯ |
| 2 | ಚರ್ಚಾಸ್ಪರ್ಧೆ | ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ |
| 3 | ಪೇಂಟಿಂಗ್ ಸ್ಪರ್ಧೆ | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ |
| 4 | ದೇಶಭಕ್ತಿಗೀತೆಗಳ ಸ್ಪರ್ಧೆ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| 5 | ಕಿರುನಾಟಕಗಳ ಸ್ಪರ್ಧೆ | ಮಂಗಳೂರು ವಿಶ್ವವಿದ್ಯಾಲಯ |
| 6 | ಪೋಸ್ಟರ್ ತಯಾರಿಕೆ ಸ್ಪರ್ಧೆ | ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ |
| 7 | ಸ್ವಾತಂತ್ರ್ಯ ಓಟ ಸ್ಪರ್ಧೆ | ಬೆಂಗಳೂರು ನಗರ ವಿಶ್ವವಿದ್ಯಾಲಯ |

I. **ಕಾಲೇಜು ಹಂತ**

- ಪ್ರಾಂಶುಪಾಲರು ಕಾಲೇಜು ಹಂತದಲ್ಲಿ ಸ್ಪರ್ಧೆಗಳನ್ನು ಆಯೋಜಿಸಿ, ಎಲ್ಲಾ ಸ್ಪರ್ಧೆಗಳ ಪ್ರಥಮ ಬಹುಮಾನ ವಿಜೇತರ ಹೆಸರುಗಳನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯದ ಸಂಪರ್ಕಾಧಿಕಾರಿಗಳಿಗೆ ಕಳುಹಿಸಿಕೊಡತಕ್ಕದ್ದು. ಹಾಗೂ ಕಾಲೇಜಿನ ಹಂತದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ತಮ್ಮ ಕಾಲೇಜಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯಂದು ಬಹುಮಾನಗಳನ್ನು ಕಾಲೇಜಿನ ವತಿಯಿಂದ ವಿತರಿಸತಕ್ಕದ್ದು.

II. **ವಿಶ್ವವಿದ್ಯಾಲಯ ಘಟಕ ಹಂತ**

- ವಿಶ್ವವಿದ್ಯಾಲಯ ಘಟಕ ಹಂತದಲ್ಲಿ ನಡೆಯುವ ಸ್ಪರ್ಧೆಗಳ ಮೇಲ್ವಿಚಾರಣೆಗಾಗಿ ಒಬ್ಬರು ನೋಡಲ್ ಅಧಿಕಾರಿಗಳನ್ನು ನೇಮಿಸಿ, ಅವರ ಹೆಸರು, ಪದನಾಮ ಹಾಗೂ ಮೊಬೈಲ್ ಸಂಖ್ಯೆಯನ್ನು ಪ್ರತಿ ಘಟಕದ ಸಂಯೋಜಿತ ಕಾಲೇಜಿನ ಪ್ರಾಂಶುಪಾಲರಿಗೆ ಕಳುಹಿಸಿಕೊಡತಕ್ಕದ್ದು.
- ಈ ಸ್ಪರ್ಧೆಗಳಲ್ಲಿ ಮೊದಲ 05 ಜನ ವಿಜೇತರ ಹೆಸರುಗಳನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯ ಮಟ್ಟದ ಸ್ಪರ್ಧೆಯನ್ನು ಆಯೋಜಿಸುವ ನೋಡಲ್ ಅಧಿಕಾರಿಗಳಿಗೆ ಕಳುಹಿಸಿಕೊಡತಕ್ಕದ್ದು

III. **ವಿಶ್ವವಿದ್ಯಾಲಯ ಅಂತರ್ ಘಟಕ ಹಂತ**

- ವಿಶ್ವವಿದ್ಯಾಲಯಗಳ ನೋಡಲ್ ಅಧಿಕಾರಿಗಳ ಮೇಲುಸ್ತುವಾರಿಯಲ್ಲಿ ವಿಶ್ವವಿದ್ಯಾಲಯ ಅಂತರ್ಘಟಕ ಮಟ್ಟದ ಸ್ಪರ್ಧೆಗಳನ್ನು ಆಯೋಜಿಸಿ, ಮೊದಲ 03 ಜನ ವಿಜೇತರ ಹೆಸರುಗಳನ್ನು ಸಂಬಂಧಪಟ್ಟ ರಾಜ್ಯಮಟ್ಟದ ಸ್ಪರ್ಧೆಯನ್ನು ಆಯೋಜಿಸುವ ನೋಡಲ್ ಅಧಿಕಾರಿಗಳಿಗೆ ಕಳುಹಿಸಿಕೊಡತಕ್ಕದ್ದು. ಹಾಗೂ ವಿಶ್ವವಿದ್ಯಾಲಯಗಳ ಅಂತರ್ಘಟಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಸ್ವಾತಂತ್ರ್ಯ ದಿನಾಚರಣೆಯಂದು ಬಹುಮಾನಗಳನ್ನು ವಿತರಿಸತಕ್ಕದ್ದು.

IV. **ರಾಜ್ಯಮಟ್ಟ**

- ವಿವಿಧ ವಿಶ್ವವಿದ್ಯಾಲಯಗಳ ಅಂತರ್ಘಟಕ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳ ನಡುವೆ ಕೋಷ್ಟಕದಲ್ಲಿ ಸೂಚಿಸಿರುವ ವಿಶ್ವವಿದ್ಯಾಲಯವು ನಿಗದಿತ ಸ್ಪರ್ಧೆಯನ್ನು ನಡೆಸಿ, ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸತಕ್ಕದ್ದು.

- ಈ ಮೇಲಿನ ಸ್ಪರ್ಧೆಗಳನ್ನು ನಡೆಸಲು ವಸತಿ, ಊಟದ, ಸಾರಿಗೆ ವ್ಯವಸ್ಥೆ ಬಹುಮಾನ ಮತ್ತು ಇತರೇ ವ್ಯವಸ್ಥೆಗಳನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯಗಳ ಹಂತದಲ್ಲಿ ನಡೆಸತಕ್ಕದ್ದು. ಹಾಗೂ ಈ ವೆಚ್ಚವನ್ನು ಪಾರದರ್ಶಕವಾಗಿ ಹಾಗು ನಿಯಮಾನುಸಾರವಾಗಿ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸುವುದು.

- ಈ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ತೆಗೆದ ಫೋಟೋ / ವಿಡಿಯೋ ವನ್ನು ಕಾಲೇಜುಗಳ ಹಾಗು ವಿಶ್ವವಿದ್ಯಾಲಯಗಳ ಜಾಲತಾಣದಲ್ಲಿ ಹಾಗು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವೆಬ್‌ಸೈಟ್/ kanbhavblr@gmail.com ಗೆ ಅಪ್‌ಲೋಡ್ ಮಾಡತಕ್ಕದ್ದು.

**75 ನೇ ವರ್ಷದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ವಿವಿಧ ಚಟುವಟಿಕೆಗಳಿಗೆ ಸಂಬಂಧಿಸಿದ ಕಾರ್ಯಕ್ರಮದ ವಿವರ.**

| ಕ್ರ.ಸಂ | ಕಾರ್ಯಕ್ರಮದ ವಿವರ | ದಿನಾಂಕ | ಷರಾ |
|---|---|---|---|
| 1 | ಕಾಲೇಜಿನ ಸೂಚನಾ ಫಲಕ / ವೆಬ್‌ಸೈಟ್ ಹಾಗೂ ತರಗತಿಗಳಲ್ಲಿ ವಿವಿಧ ಚಟುವಟಿಕೆಗಳ ಬಗ್ಗೆ ಅರಿವು ಹಾಗೂ ಘೋಷಣೆ | 08.07.2022 ರಿಂದ 11.07.2022 ರವರೆಗೆ | ಕಾಲೇಜಿನ ಪ್ರಾಂಶುಪಾಲರು ಹಾಗೂ ಅಧ್ಯಾಪಕರ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮಗಳ ಪಟ್ಟಿಯನ್ನು ತಯಾರಿಸಿ ಸ್ವಾತಂತ್ರ್ಯೋತ್ಸವದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು ಹಾಗೂ ವಿವಿಧ ಚಟುವಟಿಕೆಗಳಿಗೆ ಸಿದ್ಧತೆ ನಡೆಸುವುದು. |
| 2 | ವಿವಿದ ಚಟುವಟಿಕೆಗಳಿಗೆ ಅಧ್ಯಾಪಕರ ಮೇಲುಸ್ತುವಾರಿಯಲ್ಲಿ ಸಿದ್ಧತೆ | 11.07.2022 ರಿಂದ 15.07.2022 ರವರೆಗೆ | |
| 3 | ಕಾಲೇಜು ಹಂತದ ಸ್ಪರ್ಧೆ / ಚಟುವಟಿಕೆಗಳು | 16.07.2022 ರಿಂದ 23.07.2022 ರವರೆಗೆ | ಪ್ರಾಂಶುಪಾಲರ ನೇತೃತ್ವದಲ್ಲಿ ಕಾಲೇಜು ಹಂತದ ಕಾರ್ಯಕ್ರಮಗಳನ್ನು ಆಯೋಜಿಸುವುದು. |
| 4 | ವಿಶ್ವವಿದ್ಯಾಲಯ ಹಂತದ ಸ್ಪರ್ಧೆಗಳು | 24.07.2022 ರಿಂದ 31.07.2022 ರವರೆಗೆ | ಸಾಂಸ್ಕೃತಿ ಸಂಯೋಜನಾಧಿಕಾರಿ ನೇತೃತ್ವದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವುದು. |
| 5 | ರಾಜ್ಯ ಮಟ್ಟದ ಕಾರ್ಯಕ್ರಮಗಳು | 01.08.2022 ರಿಂದ 10.08.2022 ರವರೆಗೆ | ಕೋಷ್ಟಕದನ್ವಯ ಆಯಾ ವಿಶ್ವವಿದ್ಯಾಲಯಗಳು ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಆಯೋಜಿಸುವುದು |
| 6 | ರಾಜ್ಯ ಮಟ್ಟದ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭ | | |
| 7 | 75 ನೇ ವರ್ಷದ ಸ್ವಾತಂತ್ರ್ಯೋತ್ಸವದ ಆಚರಣೆ | 15.08.2022 | ಈ ದಿನದಂದು ವಿಶ್ವವಿದ್ಯಾಲಯ / ಕಾಲೇಜುಗಳ ಹಂತದಲ್ಲಿ ವಿಶೇಷವಾದ ಕಾರ್ಯಕ್ರಮಗಳನ್ನು ಆಯೋಜಿಸಿತಕ್ಕದ್ದು. |

Sheetal M. Hiremath

**(ಶೀತಲ್ ಎಂ. ಹಿರೇಮಠ)**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1**

ಗೆ:

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.-
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.

3. ಕುಲಸಚಿವರು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
4. ಹಣಕಾಸು ಅಧಿಕಾರಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
5. ಎಲ್ಲಾ ಸಂಯೋಜಿತ ಕಾಲೇಜುಗಳಿಗೆ – ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ವಿಶ್ವವಿದ್ಯಾಲಯಗಳ ಮುಖಾಂತರ
6. ಸರ್ಕಾರಿ, ಅನುದಾನಿತ ಕಾಲೇಜುಗಳ ಪ್ರಾಂಶುಪಾಲರಿಗೆ – ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಮುಖಾಂತರ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ:-

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಸ್ವಾತಂತ್ರ್ಯ ಅಮೃತ ಮಹೋತ್ಸವದ ಉನ್ನತ ಮಟ್ಟದ ಸಮಿತಿ ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, , ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ,ಉನ್ನತ ಶಿಕ್ಷಣ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಆಯುಕ್ತರು, ಯುವಜನ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.